Writ Petitions Pending before the High Court of Karnataka

1241 SRI H. D. DEVE GOWDA (Holenarasipur).—Will the Minister for Revenue be pleased to state.—

(a) number of Writ petitions pending in the High Court of Karnataka against the orders of the Land Tribunal in the State.

(b) whether it has come to the notice of the Government that the delay in disposal of the above W.Ps. has caused damage to the Tenants,

(c) the remedy proposed by the Government to solve the problems ?

SRI MALLIKARJUNA M. KHARGE (Minister for Revenue),—

(a) 30445 as on 31-5-1982,

(b) No.

(c) Does not arise in view of reply to (b) above.

ಶ್ರೀ ಹೆಚ್. ಡಿ. ದೇವೇಗೌಡ. —ತಾವು ಉತ್ತರದಲ್ಲಿ ೩೦೪೪೫ ರಿಟ್ ಅರ್ಜಿಗಳು ಪೆಂಡಿಂಗ್ ಇವೆ ಎಂದು ಹೇಳಿದ್ದೀರಿ. ಭೂ ಸುಧಾರಣೆ ಕಾಯಿದೆ ಕೆಳಗೆ ೩೦,೪೪೫ ರಿಟ್ ಅರ್ಜಿಗಳಿದ್ದರೆ ಚಾರಿಟಬಲ್ ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ನಿರ್ಣಯವಾಗಿ ಹೈಕೋರ್ಟ್ ಮುಂದೆ ಹೋಗಿರತಕ್ಕದ್ದೆಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ. —ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ನಿರ್ಣಯವಾಗಿರತಕ್ಕದ್ದು ಎಷ್ಟು ಎಂಬ ಬಗ್ಗೆ ಮಾಹಿತಿ ಇಲ್ಲ. ಭೂಸುಧಾರಣೆ ಕಾಯಿದೆ ಕೆಳಗೆ ಇರುವುದನ್ನು ಕೊಟ್ಟಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಭೂ ನ್ಯಾಯಮಂಡಳಿಗಳ ತೀರ್ಮಾನ ವಿರುದ್ಧ ಹೋಗಿರುವುದನ್ನು ಹೇಳಿದ್ದಾರೆ. ನಾನು ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಇದ್ದುದನ್ನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಭೂ ಸುಧಾರಣೆ ಕೆಳಗೆ ಇರುವ ರಿಟ್ ಅರ್ಜಿಗಳ ಬಗ್ಗೆ ನಾನು ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಇದ್ದು ಆಮೇಲೆ ಅದನ್ನು ಲ್ಯಾಂಡ್ ಟ್ರಿಬ್ಯೂನಲ್ ವ್ಯಾಪ್ತಿಗೆ ತಂದುಕೊಟ್ಟವು. ಆದ್ದರಿಂದ ಆ ಅಂಕಿ ಅಂಶ ಇಲ್ಲ ಅದನ್ನು ಬೇಕಾದರೆ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇನ್ನೂ ೮೫ ಸಾವಿರ ಅರ್ಜಿಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ ಎಂದು ಕೇಳಿದ್ದೇನೆ. ಇಲ್ಲಿ ಬಂದು ಪೆಂಡಿಂಗ್ ಉಳಿಯುವ ಬದಲು ಅದನ್ನು ಶೀಘ್ರವಾಗಿ ಇತ್ಯರ್ಥ ಮಾಡುವ ದೃಷ್ಟಿಯಿಂದ ಜಿಲ್ಲಾ ಮಟ್ಟದಲ್ಲಿ ಅಫಿಷಿಯಲ್ ಟ್ರಿಬ್ಯೂನಲ್ ಮಾಡಬೇಕೆಂದು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದು ಅದಕ್ಕೆ ಸರ್ಕಾರದ ಸಮ್ಮತಿ ಕೂಡ ಇತ್ತು. ಈ ವಿಷಯದಲ್ಲಿ ಸರ್ಕಾರದ ನಿಖರವಾದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ದೇವೇಗೌಡರು ಹೇಳಿದಹಾಗೆ ಒಂದು ಯೋಜನೆ ಇತ್ತು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಧೀಶರಿಗೆ ಅವಕಾಶ ಮಾಡಿಕೊಟ್ಟು ಪ್ರತಿಯೊಂದು ಜಿಲ್ಲೆಯಲ್ಲಿ ಇದನ್ನು ಬಗೆಹರಿಸಬೇಕೆಂಬ ಸಲಹೆ ಇತ್ತು. ಆದರೆ ಅದನ್ನು ಮಾಡಿದರೂ ಮುಂದೆ ಹೈಕೋರ್ಟಿಗೆ ರಿಟ್ ಅಂತೂ ಬಂದೇ ಬರುತ್ತದೆ ಎಂದು ಅದನ್ನು ಕೈಬಿಟ್ಟಿದ್ದೇವೆ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿರತಕ್ಕ ೯,೧೩,೦೦೦ ಟೆನೆನ್ಸಿ ಕೇಸ್‌ಗಳು ಆಮೇಲೆ ಡಿಕ್ಲರೇಷನ್ ಆಗಿ ಉಳಿದಂಥ ಒಂದು ಲಕ್ಷಕ್ಕಿಂತಲೂ ಹೆಚ್ಚಿನ ಕೇಸ್‌ಗಳು ಇವೆಲ್ಲಾ ಸೇರಿದರೆ ೯-೯½ ಲಕ್ಷ ಕೇಸ್‌ಗಳಿರುತ್ತವೆ. ಇದರಲ್ಲಿ ನಾಲ್ಕು ಪರ್ಸೆಂಟ್ ಜನ ಮಾತ್ರ ಹೈಕೋರ್ಟಿಗೆ ಹೋಗಿದ್ದಾರೆ. ೯ ಲಕ್ಷ ಕೇಸ್‌ಗಳಲ್ಲಿ ಹೈಕೋರ್ಟಿಗೆ

ಹೋಗಿರತಕ್ಕದ್ದು ೩೦,೪೪೫ ಕೇಸ್‌ಗಳು ಮಾತ್ರ. ಅಂದರೆ ನಾಲ್ಕು ಪರ್ಸೆಂಟ್ ಬರುತ್ತದೆ. ಪುನಃ ಜಿಲ್ಲಾ ಮಟ್ಟದಲ್ಲಿ ಅವಕಾಶ ಮಾಡಿಕೊಟ್ಟರೂ ಹೈಕೋರ್ಟಿಗೆ ರಿಟ್ ಬರುವುದು ತಪ್ಪುವುದಿಲ್ಲ. ಆದ್ದರಿಂದ ಇನ್ನೂ ಎರಡು ಅಥವಾ ಮೂರು ಸ್ಪೆಷಲ್ ಬೆಂಚ್‌ಗಳನ್ನು ಕ್ರಿಯೇಟ್ ಮಾಡಿ ಬೇಗ ಡಿಸ್ಪೋಸ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಲಾ ಡಿಪಾರ್ಟ್‌ಮೆಂಟಿಗೆ ಈಗಾಗಲೇ ಒತ್ತಾಯ ಮಾಡಿದ್ದೇವೆ. ಸ್ಪೆಷಲ್ ಬೆಂಚ್ ಕ್ರಿಯೇಟ್ ಆದರೆ ರಿಟ್‌ಗಳ ಸಂಖ್ಯೆ ಕಡಿಮೆ ಆಗುತ್ತದೆ.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಅಧ್ಯಕ್ಷರೇ, (ಆ) ಪ್ರಶ್ನೆಯಲ್ಲಿ ಸದರಿ ರಿಟ್ ಅರ್ಜಿಗಳ ವಿಲೇವಾರಿಯಲ್ಲಿನ ವಿಳಂಬದಿಂದಾಗಿ ಗೇಣಿದಾರರಿಗೆ ಹಾನಿ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ ಹೈಕೋರ್ಟಿನಲ್ಲಿ ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ೩೦,೪೪೫ ಇದರಲ್ಲಿ ಗೇಣಿದಾರರ ವಿರುದ್ಧವಾಗಿ ತೀರ್ಮಾನವಾದಂತಹ ಅರ್ಜಿಗಳ ಸಂಖ್ಯೆ ಎಷ್ಟು ? ಭೂ ಮಾಲೀಕರ ವಿರುದ್ಧವಾಗಿ ತೀರ್ಮಾನವಾದಂಥ ಅರ್ಜಿಗಳ ಸಂಖ್ಯೆ ಎಷ್ಟು ?

ಅಧ್ಯಕ್ಷರು.—೩೦,೦೦೦ ಅಂತ ಹೇಳಿದ್ದಾರೆ.

ಶ್ರೀ ಎ. ಜಿ. ಕೊಡಗಿ.—೩೦,೦೦೦ ದಲ್ಲಿ ಗೇಣಿದಾರರ ವಿರುದ್ಧವಾಗಿ ತೀರ್ಮಾನವಾದಂ ಮತ್ತು ಭೂ ಮಾಲೀಕರ ವಿರುದ್ಧವಾಗಿ ತೀರ್ಮಾನವಾಗಿರುವಂಥ ಅರ್ಜಿಗಳೆಷ್ಟು ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—೩೭,೯೫೧ ರಲ್ಲಿ, ೭೦೦೦ ಅರ್ಜಿಗಳ ಇತ್ಯರ್ಥವಾಗಿವೆ.

ಅಧ್ಯಕ್ಷರು.—೩೭,೦೦೦ ನಲ್ಲಿ ಗೇಣಿದಾರರ ವಿರುದ್ಧ ರಿಟ್ ಬಂದಿರತಕ್ಕ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಗೇಣಿದಾರರು ಮತ್ತು ಭೂ ಮಾಲೀಕರು ಇಬ್ಬರೂ ಫೈಲು ಮಾಡಿದ ವಿವರಗಳು ಇಲ್ಲ.

ಶ್ರೀ ಎ. ಜಿ. ಕೊಡಗಿ.—ವಾಸ್ತವಾಂಶ ಈ ರೀತಿ ಇರುವಾಗ ಗೇಣಿದಾರರಿಗೆ ಅನ್ಯಾಯವಾಗಿಲ್ಲ ವೆಂದು ಏತಕ್ಕೆ ಹೇಳುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—೩೦,೦೦೦ ಪೆಂಡಿಂಗ್‌ನಲ್ಲಿ ೭,೦೦೦ ತೀರ್ಮಾನವಾಗಿವೆ. ಇದರಲ್ಲಿ ೬೪೬೩ ಗೇಣಿದಾರರ ಕೇಸುಗಳನ್ನು ತೀರ್ಮಾನ ಮಾಡಿದ್ದಾರೆ. ೧೦೭೩ ಭೂ ಮಾಲೀಕರ ಕೇಸುಗಳನ್ನು ತೀರ್ಮಾನ ಮಾಡಿದ್ದಾರೆ. ಗೇಣಿದಾರರ ವಿರುದ್ಧವಾಗಿ ೧೩-೧೪ ಕೇಸುಗಳು ತೀರ್ಮಾನವಾಗಿವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಹಳ ಪ್ರಾಮುಖ್ಯವಾದದು. ಭೂ ನ್ಯಾಯ ಮಂಡಲಿಗಳಿಗೆ ಸಂಬಂಧಪಟ್ಟಂತೆ ಅಧಿಕ ಸಂಖ್ಯೆಯ ರಿಟ್ ಅರ್ಜಿಗಳು ತೀರ್ಮಾನವಾಗದೇ ಗೇಣಿದಾರರಿಗೆ ಬಹಳ ತೊಂದರೆಯಾಗಿರುವುದು ಸರ್ವವಿದಿತವಾದ ವಿಚಾರವಾಗಿದೆ ಇವತ್ತು ಗೇಣಿದಾರರು ಉಳಿದುಕೊಳ್ಳಬೇಕಾದರೆ, ಹೈಕೋರ್ಟ್ ಮಟ್ಟದಲ್ಲಿ ಪೆಂಡಿಂಗ್ ಇರತಕ್ಕ ಕೇಸುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದಕ್ಕೆ ಮಾನ್ಯ ಮಂತ್ರಿಯವರು ಏರ್ಪಾಡು ಮಾಡಬೇಕು. ಹೈಕೋರ್ಟ್‌ಗೆ ಹೋದಮೇಲೆ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಕೂಲಂಕಷವಾಗಿ, ತುರ್ತಾಗಿ ಪರಿಶೀಲನೆ ಮಾಡಿ, ಶೀಘ್ರವಾಗಿ ಇತ್ಯರ್ಥ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಎಲ್ಲೆಲ್ಲಿ ಅನ್ಯಾಯವಾಗಿದೆ ಅಂಥ ಕಡೆ ವಿಶೇಷ ಅಸಿಸ್ಟೆಂಟ್ ಕಮೀಷನರುಗಳನ್ನು ನೇಮಕ ಮಾಡಿ, ಕೊಟ್ಟಿರತಕ್ಕಂಥ ಜಡ್ಜ್‌ಮೆಂಟ್ ರಿವ್ಯೂ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇಂಥ ಕೇಸುಗಳಲ್ಲಿ ಸರ್ಕಾರದವರು ನೇರವಾಗಿ ಫೈಲು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಹೈಕೋರ್ಟಿನಲ್ಲಿ ಕಾನೂನು ರೀತ್ಯ ನಿರ್ಣಯ ಕೊಡುತ್ತಾರೆ. ಸಾವಿರಾರು ಕೇಸುಗಳನ್ನು ತೀರ್ಮಾನ ಮಾಡುವಾಗ ಕೆಲವು ಕಡೆ ಅನ್ಯಾಯವಾಗಿರಬಹುದು? ನಿರ್ದಿಷ್ಟವಾಗದಂತಹ ಪ್ರಕರಣಗಳನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ಪರಿಶೀಲಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಿಮ್ಮ ಆಕ್ಟ್‌ನಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸದೇ ಹೋದರೆ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಹೈಕೋರ್ಟಿನಲ್ಲಿ ತೀರ್ಮಾನ ವಾದಂತಹ ಕೇಸುಗಳೇ ಮತ್ತೆ ಲ್ಯಾಂಡ್ ಟ್ರಿಬ್ಯೂನಲ್‌ಗೆ ಬರುತ್ತವೆ. ಸೆಕೆಂಡ್ ಟೈಂ ರಿಟ್‌ಗೆ ಹೋಗು ವವರು ಹೋಗುತ್ತಾರೆ. ನಿಮ್ಮಲ್ಲಿ ಋಣ ಪರಿಹಾರ ಕಾಯಿದೆ ಕೆಳಗೆ ಜಮೀನು ಹೋದಂಥವರು ಬಾಕಿ ಯವರ ಜಮೀನು ಮಾಡಿಕೊಂಡಿದ್ದಾರೆ, ಸುಳ್ಳು ಪಹಣಿಗಳನ್ನು ಪಡೆದು ಕೊಂಡು ಮಾಡಿರುವಂತಹ ಸಾಕಷ್ಟು ರಿಟ್‌ಗಳು ಬಂದಿವೆ. ಲ್ಯಾಂಡ್ ರೀಫಾರ್ಮ್ಸ್ ಆಕ್ಟ್‌ನಲ್ಲಿ ಇದಕ್ಕೆ ಯಾವ ರೀತಿಯ ಕ್ರಮವೂ ಇಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಜಿಲ್ಲಾ ಮಟ್ಟ ದಲ್ಲಿ ಒಬ್ಬರನ್ನು ಡಿಸ್ಟ್ರಿಕ್ಟ್ ಜಡ್ಜ್ ನೇಮಕ ಮಾಡಿ, ಭೂನ್ಯಾಯ ಮಂಡಲಿಗಳು ಕೊಟ್ಟಂತಹ ತೀರ್ಪು ಗಳನ್ನು ಪುನರ್ ಪರಿಶೀಲನೆ ಮಾಡುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೆ ಎನ್ನುವುದನ್ನು ಯೋಚನೆ ಮಾಡಿ ಫ್ಯಾಕ್ಟ್ ಮೇಲೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೆ ಎನ್ನುವುದನ್ನು ಯೋಚನೆ ಮಾಡಿ, ಈ ವಿಚಾರದಲ್ಲಿ ತಿದ್ದುಪಡಿ ತರಲಿಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಒಂದೆರಡು ಕೇಸುಗಳಲ್ಲಿ ಅನ್ಯಾಯ ವಾಗಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಹಾಲಿ ಆಗಿರತಕ್ಕ ತೀರ್ಮಾನ ಗಳನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಅವಕಾಶ ಕೊಟ್ಟರೆ, ಲಕ್ಷಾಂತರ ಕೇಸುಗಳು ಬರತಕ್ಕಂಥ ಸಂಭವ ಉಂಟು. ಇವತ್ತಿನ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡರೆ, ೧೦೦ಕ್ಕೆ ೪ ರಷ್ಟು ಹೈಕೋರ್ಟಿಗೆ ಕೇಸುಗಳು ಬಂದಿವೆ. ಹೆಚ್ಚು ಜನ ಭೂ ಮಾಲೀಕರೇ ಹೋಗಿರಬಹುದು. ನನ್ನ ಹತ್ತಿರ ಅಂಕಿ ಸಂಖ್ಯೆ ಗಳು ಇಲ್ಲ. ತರಿಸಿಕೊಡುತ್ತೇನೆ. ಜಿಲ್ಲಾ ಮಟ್ಟದಲ್ಲಿ ಅಪೀಲು ಮಾಡುವುದಕ್ಕೆ ಅವಕಾಶ ಕೊಟ್ಟರೆ, ಬಡವರಿಗೆ ಧಕ್ಕೆಯಾಗುತ್ತದೆ ಎನ್ನುವುದನ್ನು ನನ್ನ ವೈಯಕ್ತಿಕ ಅಭಿಪ್ರಾಯವೂ ಆಗಿದೆ, ಸರ್ಕಾರದ ನಿಲುವು ಕೂಡ ಆಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಹೈ ಕೋರ್ಟ್‌ನವರು ಅಂತಿಮವಾಗಿ ತೀರ್ಮಾನ ಮಾಡುವುದಿಲ್ಲ. ಈ ಕೇಸುಗಳು ರಿಮ್ಯಾಂಡ್ ಆಗಿ ಬರುತ್ತವೆ. ಅನಂತರ ಟ್ರಿಬ್ಯುನಲ್ಸ್ ಇವನ್ನು ತೀರ್ಮಾನ ಮಾಡು ತ್ತವೆ. ಪುನಃ ಅವರು ಹೈಕೋರ್ಟಿಗೆ ಹೋಗುತ್ತಾರೆ. ಇದು ಮುಗಿಯುವುದೇ ಇಲ್ಲ. ಈ ಭೂ ವಿವಾದವನ್ನು ಅಂತಿಮವಾಗಿ ತೀರ್ಮಾನ ಮಾಡಬೇಕೆಂದು ಒಂದು ಶಾಸನವನ್ನು ಮಾಡಿದ್ದೇವೆ. ಆ ಶಾಸನದಲ್ಲಿರತಕ್ಕ ಕೆಲವು ಲೋಪದೋಷಗಳಿಂದ ಇದಕ್ಕೆ ಮುಕ್ತಾಯವೇ ಇಲ್ಲದಂತಾಗಿದೆ. ಇದರಿಂದ ಗೇಣಿದಾರರಿಗೆ ತೊಂದರೆಯಾಗುತ್ತದೆಂದು ಹೇಳುತ್ತಿರುವುದರಿಂದ ಇದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ, ಖಾರ್ಗೆ.—ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದರೆಮಾಡೋಣ. ಆದರೆ ನಾನುಇದನ್ನು ಪೂರ್ತಿಯಾಗಿ ಪರಿಶೀಲಿಸಿ ನೋಡಿದ್ದೇನೆ. ಇದನ್ನು ಜಿಲ್ಲಾ ಮಟ್ಟದಲ್ಲಾ ಗಲಿ, ಸಬ್ ಡಿವಿಜನ್ ಮಟ್ಟದಲ್ಲಾಗಲಿ ಇಂಥ, ಪ್ರೊವಿಷನ್ ಮಾಡಿಕೊಟ್ಟರೆ ಶ್ರೀಮಂತರು ಅಥವಾ ಲ್ಯಾಂಡ್ ಲಾರ್ಡ್ಸ್ ಇದರ ಲಾಭವನ್ನು ಪಡೆದುಕೊಳ್ಳುತ್ತಾರೆ. ಅಲ್ಲಿ ರಿವಿಷನ್‌ನಲ್ಲಿ ಅವರ ಪರವಾಗಿ ಆಗಲಿಲ್ಲ ಎಂದರೆ ಮತ್ತೆ ಅವರು ಹೈಕೋರ್ಟಿಗೆ ಹೋಗೆ ಹೋಗುತ್ತಾರೆ. ರಿಟ್ ಜೂರಿಸ್‌ಡಿಕ್ಷನ್‌ನ್ನು ನೀವು ವಾಪಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಈಗಿರತಕ್ಕದ್ದೇ ಸರಿಯಾಗಿದೆ ಎಂದು ಅನೇಕ ಜನರ ಅಭಿಪ್ರಾಯ.

SRI A. LAKSHMISAGAR.—In order to dispose of the heavy pendency of writ petitions arising out of the decisions, the Constitution provides for constitution of benches consisting of retsred Judges. Article 224 provides for appointment of retired Judges whose services may be made use of

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈಗಾಗಲೇ ನಾವು ಕಾನೂನು ಇಲಾಖೆಯವರನ್ನು ಕೇಳಿಕೊಂಡಿದ್ದೇವೆ. ಅದು ಬಂದ ಕೂಡಲೇ ನಾವು ಮಾಡಿಸುತ್ತೇವೆ. ಈಗಲೇ ಇದನ್ನು ಹೇಳುವು ದಕ್ಕೆ ಬರುವುದಿಲ್ಲ. ಎಷ್ಟೋಸಾರಿ ರಿಟ್ ಪಿಟಿಷನ್ಸ್ ಇದೇ ರೀತಿ ಆಗುತ್ತವೆ. ಅನೇಕ ಸಾರಿ ರಿಮ್ಯಾಂಡ್ ಮಾಡುತ್ತೇವೆ. ಮತ್ತೆ ಅವರು ರಿಟ್ ಹೋದಾಗ ಅದನ್ನು ರೆಡ್ಯೂಸ್ ಮಾಡುತ್ತಾರೆ. ಇದರಲ್ಲಿ ಕನ್‌ವಿಕ್ಷನ್ ಪ್ರಶ್ನೆ ಇದೆ. ಅದು ಸದಸ್ಯರ ಮೇಲೆ ಹೋಗುತ್ತದೆ.